ಒಪ್ಪದ ಶಿಯಾ ನಾಯಕ, "ನಿಮ್ಮ ದೇಶದ ಬಡತನ ಬೇರೆಯಿರಬಹುದು. ಆದರೆ ನಮ್ಮ ದೇಶದಲ್ಲಿ ನಮ್ಮದು ಬಡತನದ ಸ್ಥಿತಿಯೇ ಆಗಿದೆ. ಎರಡು ದೇಶಗಳ ಬಡತನವನ್ನು ಹೋಲಿಸುವುದು ತಪ್ಪಾಗುತ್ತದೆ. ನಮಗೆ ದಕ್ಕಬೇಕಾದ ಸ್ವಾತಂತ್ರ್ಯ ಮತ್ತು ಆರ್ಥಿಕ ಅನುಕೂಲಗಳು ಇಲ್ಲಿ ದಕ್ಕಿಲ್ಲ. ಅದಕ್ಕಾಗಿ ನಾವು ಹೋರಾಡಲೇ ಬೇಕಿದೆ" ಎಂದು ತನ್ನನ್ನು ಸಮರ್ಥಿಸಿಕೊಳ್ಳುತ್ತಾನೆ.

ಕ್ರಾಂತಿಯು ಹಿಂಸೆಯನ್ನು ತನ್ನ ಒಡಲಿನಲ್ಲಿ ತುಂಬಿಕೊಂಡಿರುತ್ತದೆ. ಈ ಸುನ್ನಿ–ಶಿಯಾ ಸಂಘರ್ಷದ ಕ್ರಾಂತಿಯು ಹೇಗೆ ಜನರ ರಕ್ತವನ್ನು ಹೀರುತ್ತದೆ ಎನ್ನುವ ಹಲವು ಪ್ರಸಂಗಗಳನ್ನು ಕಾದಂಬರಿಕಾರರು ಕಟ್ಟಿಕೊಟ್ಟಿದ್ದಾರೆ. 'ರೇಡಿಯೊ ಜಾಕಿ'ಯಂತಹ ಬಹು ಸಾಮಾನ್ಯ ಕೆಲಸದಲ್ಲಿ ತೊಡಗಿಕೊಂಡಿರುವ ಸಮೀರಳ ಬದುಕಿನಲ್ಲೂ ಈ ಸಂಘರ್ಷ ಎಂತಹ ದೌರ್ಜನ್ಯವನ್ನು ಎಸಗುತ್ತದೆ ಎನ್ನುವುದನ್ನು ಕಾದಂಬರಿಕಾರರು ತೋರಿಸಿಕೊಡುತ್ತಾರೆ. ಸಂಘರ್ಷದ ಹಿಂಸೆಯಿಂದಾಗಿ ಕಲೆಯು ಸೊರಗುತ್ತದೆ ಎನ್ನುವ ಕೊರಗೂ ಇಲ್ಲಿ ಧ್ವನಿತಗೊಂಡಿದೆ.

ಅತ್ಯಂತ ಸರಳವಾದ ಭಾಷೆಯಲ್ಲಿ ಕಥನವನ್ನು ನಿರೂಪಿಸಲಾಗಿದೆ. ಈ ಕಾದಂಬರಿಯ ವಸ್ತು ಮಹತ್ವದ್ದಾದರೂ, ಕೃತಿಯು ನಮ್ಮ ಅಂತರಂಗವನ್ನು ಮುಟ್ಟುವಲ್ಲಿ ಅಷ್ಟೇನೂ ಯಶಸ್ವಿಯಾಗಿಲ್ಲ. ದಿನಪತ್ರಿಕೆಗಳ ವರದಿಯಂತೆ ಸಂಘರ್ಷದ ಘಟನೆಗಳನ್ನು ಲೇಖಕರು ಒಂದರ ನಂತರ ಒಂದಾಗಿ ಹೇಳುತ್ತಲೇ ಹೋಗುತ್ತಾರೆ. ಅದಕ್ಕೂ ಕಥನಕ್ಕೂ ಸಂಬಂಧವೇ ಇಲ್ಲದಂತೆ ವಿವರಗಳನ್ನು ನೀಡುತ್ತಾರೆ. ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುವುದರಿಂದ ಸಾಕಷ್ಟು ಕಡೆಗಳಲ್ಲಿ ಕಥನ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳುತ್ತದೆ. ಇಡೀ ಸಂಘರ್ಷವನ್ನು ತಮ್ಮ ಕಾದಂಬರಿಯ ಕಥನಕ್ಕೆ ಜೋಡಿಸುವ ಬಲವಂತದಿಂದಾಗಿ ಕಾದಂಬರಿಯ ಕೊನೆಯಲ್ಲಿ ನಿರೂಪಕಿಯ ಬದುಕಿನ ಸಂಕಷ್ಟಗಳನ್ನು ಕಟ್ಟಿಕೊಡುತ್ತಾರೆ. ಇದು ಒತ್ತಾಯದ ಕಥೆಕಟ್ಟುವಿಕೆಯಾಗಿ ಗೋಚರಿಸುತ್ತದೆಯೇ ಹೊರತು ಸಹಜವಾಗಿ ಓದುಗರ ಮುಂದೆ ಅರಳುವುದಿಲ್ಲ. ಆದರೆ ವಸ್ತು ಮುಖ್ಯವೇ ಅಥವಾ ಕಥನ ಮುಖ್ಯವೇ ಎನ್ನುವುದು ಉತ್ತರವಿಲ್ಲದ ಪ್ರಶ್ನೆಯಾಗಿ ಓದುಗರ ಮುಂದೆ ನಿಲ್ಲುತ್ತದೆ.

ಕಾದಂಬರಿಯ ಸಾಫಲ್ಯದ ವಿಚಾರ ಬೇರೆ; ಅದು ಓದುಗರ ಅಭಿರುಚಿಗೆ ಸಂಬಂಧಿಸಿದ್ದು. ಆದರೆ ಮಲಯಾಳಂ ಕೃತಿಯೊಂದು ಇಡೀ ದೇಶದ ಅತ್ಯಂತ ಹೆಚ್ಚಿನ ಮೊತ್ತದ ಪ್ರಶಸ್ತಿಯನ್ನು ಪಡೆದಿದೆ ಎನ್ನುವುದು ಬಹಳ ಮಹತ್ವದ ಸಂಗತಿಯಾಗುತ್ತದೆ. ಈ ಹಿಂದೆ ಅರುಂಧತಿ ರಾಯ್ ಅವರು ತಮ್ಮ ಮಲಯಾಳಂ ಜಗತ್ತಿನ ಕಥನಕ್ಕೆ ಪ್ರತಿಷ್ಠಿತ 'ಮ್ಯಾನ್ ಬೂಕರ್' ಪ್ರಶಸ್ತಿಯನ್ನು ಪಡೆದಿದ್ದು ನೆನಪಿರಬಹುದು. ಆದರದು ಇಂಗ್ಲಿಷ್ ಭಾಷೆಯಲ್ಲಿ ಬರೆದ ಕೃತಿ. ಅದು ಮತ್ತೊಂದಿಷ್ಟು ಭಾರತೀಯರಿಗೆ ಇಂಗ್ಲಿಷ್ ಭಾಷೆಯಲ್ಲಿ ಬರೆಯಲು ಪ್ರೋತ್ಸಾಹಿಸಿ, ಮಲೆಯಾಳಂ ಲೇಖಕರಿಗೆ ಅಸೂಯೆಯನ್ನೂ ಕೀಳರಿಮೆಯನ್ನೂ ಮೂಡಿಸಿತ್ತು. ಈಗಿನ ಜೆಸಿಬಿ ಪ್ರಶಸ್ತಿ ಬೇರೆಯದೇ ರಾಗವನ್ನು ನುಡಿಸುತ್ತಿದೆ. ದೇಶೀಯ ಭಾಷೆಯ ಲೇಖಕರು ತಮ್ಮ ಹೊಸ ಕೃತಿಗೆ ಈ ಪ್ರಶಸ್ತಿಯ ಕನಸನ್ನು ಕಾಣುವಂತೆ ಮಾಡುವಲ್ಲಿ ಇದು ಸಫಲವಾಗಿದೆ.

**ವಸುಧೇಂದ್ರ**

ಸಣ್ಣಕತೆಗಾರ, ಪ್ರಬಂಧಕಾರ, ಅನುವಾದಕ ವಸುಧೇಂದ್ರ 'ಛಂದ ಪುಸ್ತಕ' ಎಂಬ ಪ್ರಕಾಶನ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಬಳ್ಳಾರಿಯ ಸಂಡೂರು ಅವರ ಊರು. ಕತೆ, ಪ್ರಬಂಧ, ಅನುವಾದಗಳ ಮಹತ್ವದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.